ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 208-211
©*IIMRD*, Mysuru
IIMRD JOURNALS
www.iimrd.com

# ಭಾರತದ ಇತಿಹಾಸ ಪುನರ್ರಚನೆ ಮತ್ತು ಮಹಿಳಾ ಪ್ರಶ್ನೆ

**ಡಾ. ಬಿ. ಪಿ. ಇಂದಿರಾ***

*ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

***ಸಾರಾಂಶ* (Abstract)**

*ಭಾರತದ ಇತಿಹಾಸ ಸಂರಚನೆ ಬ್ರಿಟಿಷರ ಕೊಡುಗೆಯಾಗಿದೆ. ಬ್ರಿಟೀಷ್ ವಿದ್ವಾಂಸರು ನೀಡಿರುವ ಐತಿಹಾಸಿಕ ಚೌಕಟ್ಟು ಅನೇಕ ದಶಕಗಳವರೆಗೆ ಭಾರತೀಯ ಬರಹಗಳಲ್ಲೂ ಅಂತರ್ಗತವಾಯಿತು. ಇದರಿಂದ ಅನೇಕ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಪರಿಣಾಮಗಳುಂಟಾಗಿವೆ. 19ನೇಯ ಶತಮಾನದ ಆರಂಭದ ಐತಿಹಾಸಿಕ ಬರವಣಿಗೆಗಳಲ್ಲಿ 'ಮಹಿಳಾ ಪ್ರಶ್ನೆ' ಕೇಂದ್ರವಾಯಿತು. ರಾಷ್ಟ್ರೀಯತೆ ಮತ್ತು ವಸಾಹತುಶಾಹಿತ್ವದ ಹಿನ್ನೆಲೆಯಲ್ಲಿ ಒಡಮೂಡಿದ ಈ ಮಹಿಳಾ ಪ್ರಶ್ನೆ ಪ್ರಸ್ತುತ ಪ್ರಬಂಧದ ಪ್ರಮುಖ ಚರ್ಚಿತ ವಿಷಯವಾಗಿದೆ.*

***ಮುಖ್ಯಪದಗಳು* (Keywords):** ಇತಿಹಾಸ ಪುನರ್ರಚನೆ, ಬ್ರಿಟೀಷ್, ಮಹಿಳೆ, ವಸಾಹತುಶಾಹಿ.

**ಪೀಠಿಕೆ**

19ನೆಯ ಶತಮಾನ ಭಾರತದ ಇತಿಹಾಸದಲ್ಲೊಂದು ಸಂಕ್ರಮಣದ ಕಾಲ. ಈ ಶತಮಾನದುದ್ದಕ್ಕೂ ಘರ್ಷಣೆ–ವೈರುಧ್ಯ–ಸಮನ್ವಯತೆಯನ್ನು ನೋಡಬಹುದು. ಈ ಕಾಲಮಾನದಲ್ಲಿ ಸ್ಥಿರಗೊಂಡ ಮೌಲ್ಯಗಳು ಮುಂಬರುವ ಶತಮಾನಗಳಲ್ಲಿ ಭಾರತೀಯ ಸಮಾಜದ ಮೇಲೆ ಅಪಾರ ಪರಿಣಾಮ ಬೀರಿರುವುದನ್ನು ಕಾಣಬಹುದು. ಆದ್ದರಿಂದ ಈಗ ಮತ್ತೆ ಐತಿಹಾಸಿಕ ಪ್ರಕ್ರಿಯೆಗಳ ಪುನರಾವಲೋಕನ ಮಾಡಿ ಮಹಿಳಾ ಇತಿಹಾಸ ಸಂರಚನೆಯು ಹೊಸನಿಟ್ಟಿನಲ್ಲಿ ನಡೆಯಬೇಕಿದೆ.

ಭಾರತದ ಇತಿಹಾಸದ ಪುನರ್ರಚನೆಯಲ್ಲಿ ಯುರೋಪಿಯನ್ನರ, ಅದರಲ್ಲೂ ಬ್ರಿಟೀಷರ ಗ್ರಹಿಕೆಗಳು ಎರಡು ಪ್ರತ್ಯೇಕ ಹಾಗೂ ವೈರುಧ್ಯ ದಿಕ್ಕಿನಲ್ಲಿ ಕಾರ್ಯ ನಿರ್ವಹಿಸಿದವು. ಓರಿಯಂಟಲಿಸ್ಟ್ ಇತಿಹಾಸಕಾರರು ಭಾರತೀಯ ನಾಗರೀಕತೆಯ ಇತಿಹಾಸದ ವೈಭವವನ್ನು ಪುನಃ ಸೃಷ್ಟಿಸುವ ಪ್ರಯತ್ನ ಮಾಡಿದರು. ಇವರು ವೇದಗಳ ಕಾಲದ 'ಸುವರ್ಣಯುಗ'ದ ಸೃಷ್ಟಿಗೆ ಪ್ರಯತ್ನಿಸಿ ಅಲ್ಲಿ ಮಹಿಳೆ ಸರ್ವತಂತ್ರ ಸ್ವತಂತ್ರಳಾಗಿದ್ದಳೆಂಬ ಅಂಶವನ್ನು ಪ್ರತಿಪಾದಿಸತೊಡಗಿದರು. ಆರಂಭದ ಓರಿಯಂಟಲಿಸ್ಟರಲ್ಲಿ ವಿಲಿಯಂ ಜೋನ್ಸ್ ಹಾಗೂ ಹೆಚ್.ಟಿ. ಕೋಲ್‌ಬ್ರೂಕ್ ಪ್ರಮುಖರಾಗಿದ್ದಾರೆ. ಕೋಲ್‌ಬ್ರೂಕ್ ತನ್ನ ಸಂಶೋಧನಾ ಗ್ರಂಥ "On the Duties of the faithful Widow"ನಲ್ಲಿ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾನೆ [1]. ಮ್ಯಾಕ್ಸ್ ಮುಲ್ಲರನ

ಸಂಶೋಧನೆಗಳಲ್ಲಿ ಆರ್ಯ–ಹಿಂದೂ ನಾಗರೀಕತೆಯ ವೈಭವೀಕೃತ ಚಿತ್ರಣ ಕಾಣಬರುತ್ತದೆ. ವೈದಿಕ ಸುವರ್ಣ ಯುಗದ ಕಲ್ಪನೆಯನ್ನು ಹುಟ್ಟು ಹಾಕ್ಕಿದ್ದೇ ಮ್ಯಕ್ಸ್‌ಮುಲ್ಲರ್, ಇವನ ಬರಹಗಳಿಂದ ಸ್ಪೂರ್ತಿಗೊಂಡ ಇಬ್ಬರು ಯುರೋಪಿಯನ್ ಮಹಿಳಾ ಬರಹಗಾರರಾದ ಶ್ರೀಮತಿ 'ಸ್ಪಿಯರ್ ಹಾಗೂ ಕ್ಲಾರಿಸ್ ಬೇಡರ್ ತಮ್ಮ ಬರಹಗಳಲ್ಲಿ ಪುರಾತನ ಭಾರತೀಯ ಮಹಿಳೆಯ ರಮ್ಯ ಚಿತ್ರಣ ನೀಡಿದ್ದಾರೆ. ಶ್ರೀಮತಿ ಸ್ಪಿಯರ್ "Life in Ancient India" ಗ್ರಂಥದಲ್ಲಿ ಗಾರ್ಗಿ ಮೈತ್ರೇಯಿಯರ ಉದಾಹರಣೆಯೊಂದಿಗೆ ವೈದಿಕ ನಾಗರಿಕತೆಯ ಕಾಲದಲ್ಲಿದ್ದ ಮಹಿಳೆಯ ಉತ್ಕೃಷ್ಟ ಸ್ಥಾನಮಾನದ ವೈಭವೀಕರಣ ಮಾಡಿದ್ದಾರೆ. ಕ್ಲಾರಿಸ್ ಬೇಡರ್ 'ಸತಿ' ಪದ್ಧತಿಯನ್ನು ವೈಭವೀಕರಿಸಿ ಅದನ್ನು ಪತ್ನಿಗೆ ತನ್ನ ಪತಿಯ ಮೇಲಿರುವ ಅಪ್ರತಿಮ ಪ್ರೇಮದ ಸಂಕೇತ ಎಂದು ವರ್ಣಿಸುತ್ತಾರೆ.[2] ಒಟ್ಟಿನಲ್ಲಿ ಒರಿಯಂಟರಿಸ್ಟ್ ಬರಹಗಳು ಭಾರತೀಯ ಬರಹಗಳ ಮೇಲೆ ಅಪಾರ ಪ್ರಭಾವ ಬೀರಿದವು.

ಯುಟಿಲಿಟೇರಿಯನ್ ಬರಹಗಾರರು ಜೇಮ್ಸ್‌ಮಿಲ್, ಗ್ರಾಂಟ್ ಮುಂತಾದವರು ನಿಂತ ನೀರಾಗಿದ್ದ ಭಾರತೀಯ ಸಮಾಜದಲ್ಲಿ ಮಹಿಳೆಯ ಹೀನಾಯ ಸ್ಥಿತಿಯನ್ನು ಕಟು ಮಾತಿನ ಟೀಕೆಯಿಂದ ಪ್ರತಿಪಾದಿಸಿದರು. ಇವರ ಬರಹಗಳೂ ಮಹಿಳೆಯ ಪ್ರಶ್ನೆಯನ್ನು ಕೈಗೆತ್ತಿಗೊಂಡು ಭಾರತೀಯ ಮಹಿಳೆಯ ದುರವಸ್ಥೆ ಈ ದೇಶದ ಅನಾಗರಿಕತೆಯ ಸಂಕೇತ ಎಂದರು. ಇಂತಹ ಅವನತಿಗೊಂಡ ಭಾರತೀಯ ಅನಾಗರಿಕ ಸಮಾಜದ ಪುನರುತ್ಥಾನವೇ ಬ್ರಿಟೀಷರ ಆಡಳಿತದ ಪರಮಗುರಿ ಎಂದು ಸಾರಿದರು. ಈ ಯುಟಿಲಿಟೇರಿಯನ್ನರು ಹಾಗೂ ಎವಾಂಜಲಿಸ್ಟರ ನಿರಂತರ ಟೀಕೆಗಳು ಭಾರತೀಯರಲ್ಲಿ (ವಿದ್ಯಾವಂತ) ಆತ್ಮ ವಿಮರ್ಶೆ ಮೂಡಿಸಿದವು.

19ನೇ ಶತಮಾನದ ಆರಂಭದಲ್ಲಿ ರೂಪುಗೊಂಡ ಆಧುನಿಕ ವಿದ್ಯಾವಂತವರ್ಗ ಒರಿಯಂಟಲಿಸ್ಟ್ ಬರಹಗಳಿಂದ ಪ್ರಭಾವಿತರಾಗಿ ತಮ್ಮ ಇತಿಹಾಸ ಪರಂಪರೆಯ ಬಗ್ಗೆ ಹೆಮ್ಮೆ, ಆತ್ಮಗೌರವ ಬೆಳೆಸಿಕೊಂಡರು. ಯುಟಿಲಿಟೇರಿಯನ್ನರ ಟೀಕೆಯಿಂದಾಗಿ ಸುಧಾರಣಾ ಅಲೆ ಆರಂಭವಾಯಿತು. ಪುನಃ ಸಾಮಾಜಿಕ ಸುಧಾರಣಾ ಚಳುವಳಿಗಳ ಸಂದರ್ಭದಲ್ಲೂ 'ಮಹಿಳಾ ಪ್ರಶ್ನೆ'ಯೇ ಪ್ರಮುಖವಾಯಿತು. ಈ ಎಲ್ಲಾ ಸುಧಾರಣಾವಾದಿಗಳು ಹಿಂದೂ ಸಮಾಜದಲ್ಲಿ ಮೇಲ್ವರ್ಗಗಳಲ್ಲಿ ಕಾಣಬರುತ್ತಿದ್ದ ಸತಿಪದ್ದತಿ – ಬಾಲ್ಯ ವಿವಾಹ, ವಿಧವೆಯರ ದಾರುಣ ಸ್ಥಿತಿ ಮುಂತಾದವುಗಳನ್ನು ಕಟುವಾಗಿ ಟೀಕಿಸಿದರು. ಈ ಕಾಲದ ಮತ್ತೊಂದು ಪ್ರಮುಖ ಅಂಶವೆಂದರೆ ಸುಧಾರಣಾವಾದಿಗಳು ಹಾಗೂ ಸನಾತನವಾದಿಗಳಿಬ್ಬರೂ ತಮ್ಮ ಚರ್ಚೆಗೆ ಪೂರಕವಾಗಿ ಪುರಾತನ ಧಾರ್ಮಿಕ ಶಾಸ್ತ್ರೀಯ ಗ್ರಂಥಗಳನ್ನೇ ಬಳಸಿಕೊಂಡರು. ಧಾರ್ಮಿಕ ಗ್ರಂಥಗಳು ಪ್ರಾಚೀನವಾದಷ್ಟು ಅಧಿಕೃತವೆಂದು ಭಾವಿಸಿದರು. ಜೊತೆಗೆ ಆರಂಭದ ಸುಧಾರಣಾವಾದಿಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸಾಮ್ರಾಜ್ಯಷಾಹಿ ಪ್ರಭುಗಳ ಅಂದರೆ ಬ್ರಿಟೀಷರ ಮಧ್ಯಸ್ಥಿಕೆಯನ್ನು ಬಯಸಿದರು. ಈ ಸುಧಾರಣಾವಾದಿಗಳು ಮಹಿಳೆಯನ್ನು ಪಿತೃಪ್ರಧಾನ ವ್ಯವಸ್ಥೆಯ ಸಾಂಸಾರಿಕ ಚೌಕಟ್ಟಿನೊಳಗೆ ಗುರುತಿಸುವ ಪ್ರಯತ್ನ ಮಾಡಿದರು. ಪ್ರೊ. ಸುಮಿತ್ ಸರ್ಕಾರ್ ಅವರು ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿಗಳ ಮಿತಿ ಹಾಗೂ ವೈರುಧ್ಯಗಳನ್ನು ತೀವ್ರವಾಗಿ ಟೀಕಿಸುತ್ತಾರೆ.[3]

1830ರ ನಂತರ 'ಸಾಂಸ್ಕೃತಿಕ ರಾಷ್ಟ್ರೀಯತೆ' ಆರಂಭವಾಯಿತು. ಈ ಹಂತದಲ್ಲಿ ಭಾರತೀಯ ಬರಹಗಾರರು ವೈದಿಕ ಯುಗದ ವೈಭವೀಕರಣದಿಂದ ಸ್ಫೂರ್ತಿಗೊಂಡರು. ಇದಕ್ಕೆ ಪ್ರಮುಖ ಕಾರಣಗಳೆಂದರೆ ಯುಟಿಲಿಟೇರಿಯನ್ನರು ಹಾಗೂ ಆಂಗ್ಲಸಿಸ್ಟರು ಹಿಂದೂ ನಾಗರಿಕತೆಯ ಮೇಲೆ ಮಾಡುತ್ತಿದ್ದ ನಿರಂತರ ಪ್ರಹಾರಗಳು ಹಾಗೂ ಪಾದ್ರಿಗಳ ಮತಾಂತರ ಚಟುವಟಿಕೆಗಳು. ಇದು ಹಿಂದೂ ಧರ್ಮದ ನಾಶಕ್ಕೆಂದೇ ಭಾವಿಸಲಾಯಿತು. ಈ 'ಸಾಂಸ್ಕೃತಿಕ ರಾಷ್ಟ್ರೀಯತೆ' ಉಗ್ರವಾಗಿದ್ದು, ಆರಂಭದ ಸುಧಾರಣಾವಾದಿಗಳ ಸಾರ್ವತ್ರಿಕತೆಗಿಂತ ಭಿನ್ನವಾಗಿತ್ತು. ಈ ಕಾಲದಲ್ಲಿ ರೂಪುಗೊಂಡ ಹಿಂದೂ 'ಅನನ್ಯತೆ' (Identity) ಆರ್ಯೇತರರನ್ನು ಹಾಗೂ ಮುಸ್ಲೀಂರನ್ನು ದೂರವಿರಿಸಿತು. ಬಂಕಿಮ್‌ರ ಬರಹಗಳಲ್ಲಿ 'ಸಾಂಸ್ಕೃತಿಕ ರಾಷ್ಟ್ರೀಯತೆ' ಪರಾಕಾಷ್ಠೆಯನ್ನು ಮುಟ್ಟಿತು. ಬಂಕಿಮ್‌ರ ಬರಹಗಳು ಭಾರತೀಯ ಮಹಿಳೆಗೆ ಕ್ಷಾತ್ರ ಗುಣಗಳನ್ನು ನೀಡಿ ಶಕ್ತಿ ಸ್ವರೂಪಿಣಿಯಾಗಿ (ಸಂದರ್ಭಕ್ಕೆ ತಕ್ಕಂತೆ) ಪವಿತ್ರ, ಪರಿಶುದ್ಧ ತ್ಯಾಗಮಯಿ ಎಂಬಂತೆ ಚಿತ್ರಿಸಲಾಯಿತು. 19ನೇ ಶತಮಾನದ ಕೊನೆಯ ಹೊತ್ತಿಗೆ ಮಹಿಳೆಯೆಂದರೆ ಪೂರ್ವದೇಶಗಳ ಆಧ್ಯಾತ್ಮಿಕ ಪರಿಪೂರ್ಣತೆಯ ಸಂಕೇತ ಎಂಬಂತೆ ಭಾವಿಸಲಾಯಿತು. ಈ ಕಾಲಕ್ಕಾಗಲೇ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆ ಆರಂಭವಾಗಿದ್ದರಿಂದ ಆಧುನಿಕ ವಿದ್ಯಾವಂತ ಪುರುಷವರ್ಗ ತಮ್ಮ ಮಹಿಳೆಯರಿಗೆ ತಕ್ಕಂತಹ ವಿದ್ಯಾಭ್ಯಾಸದ ಕ್ರಮದ ಬಗ್ಗೆ ತೀವ್ರ ಚರ್ಚೆಗಳನ್ನೇ ರೂಪಿಸಿದರು. ಆಧುನಿಕ ವಿದ್ಯಾಭ್ಯಾಸ ಹೊರ ಜಗತ್ತಿನ ಬದಲಾವಣೆಗಳಿಗೆ ತಕ್ಕಂತೆ ಹೆಣ್ಣುಮಕ್ಕಳಿಗೆ ನಯ, ವಿನಯ, ನಾಜೂಕು, ತಾಳ್ಮೇ ಗುಣಗಳನ್ನು ಮೇಳೈಸಿ ಸಂಸಾರದ ಜವಾಬ್ಧಾರಿಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುವಂತಹ ವಿದ್ಯೆಯಾಗಬೇಕೆಂದು ಬಯಸಿದರು.

19ನೇಯ ಶತಮಾನದ ಕೊನೆಯ ಹೊತ್ತಿಗೆ ರಾಜಕೀಯ ಪ್ರಶ್ನೆ ಪ್ರಮುಖವಾಗಿ ಭಾರತೀಯ ಸುಧಾರಣಾವಾದಿಗಳು ಹಾಗೂ ರಾಷ್ಟ್ರೀಯವಾದಿಗಳ ನಡುವೆ ತೀವ್ರ ಭಿನ್ನಭಿಪ್ರಾಯ ಉಂಟಾಗಿ ಸಾಮಾಜಿಕ ಸುಧಾರಣೆಗಳ ಪ್ರಶ್ನೆ ಹಿಂದೆ ಸರಿದು ರಾಜಕೀಯ ಪ್ರಶ್ನೆಯೇ ಪ್ರಮುಖವಾಯಿತು. ಉದಾಹರಣೆ– ತಿಲಕ್ ರಾನಡೆ.[4] 19ನೇ ಶತಮಾನದ ಕೊನೆಗೆ ಆದರ್ಶ ಮಹಿಳಾ ಮಾದರಿಯ ಕಲ್ಪನೆ ನಿಚ್ಛಳವಾಗಿ ರೂಪುಗೊಂಡು ಮುಂಬರುವ ದಶಕಗಳಿಗೆ ಮಾದರಿಯಾಯಿತು.

ಆದರೆ ಆಧುನಿಕ ಸ್ತ್ರೀವಾದಿಗಳ ಮುಂದಿರುವ ಪ್ರಶ್ನೆ ಹೊಸದಾಗಿ ಇತಿಹಾಸದಲ್ಲಿ ರೂಪುಗೊಂಡ ಮಹಿಳೆ ಯಾರು? ಅವಳು ಇಡೀ ಭಾರತೀಯ ಮಹಿಳಾ ಸಮಾಜದ ಪ್ರತಿನಿಧಿಯೇ? 19ನೇ ಶತಮಾನದಲ್ಲಿ ಸುಧಾರಣಾವಾದಿಗಳು ಕೈಗೆತ್ತಿಕೊಂಡ ಮಹಿಳಾ ಪರ ಸುಧಾರಣೆಗಳು ಎಷ್ಟರಮಟ್ಟಿಗೆ ಇಡೀ ಭಾರತೀಯ ಮಹಿಳಾ ಸಮೂಹದ ಧ್ವನಿಯಾಗಿತ್ತು? 19ನೇ ಶತಮಾನದಲ್ಲಿ 'ಮಾದರಿ ಮಹಿಳೆ'ಯನ್ನು ರೂಪಿಸಿದ ಪುರುಷ ವರ್ಗ ಮಹಿಳೆಯನ್ನು ತಮ್ಮ ಚರ್ಚೆಗಳ ವಸ್ತುವಾಗಿ ಪರಿಗಣಿಸುವ ಗೋಜಿಗೆ ಹೋಗಲಿಲ್ಲ. ಇಡೀ 19ನೇ ಶತಮಾನದುದ್ದಕ್ಕೆ ಮಹಿಳಾ ಧ್ವನಿ ಅಡಗಿಯೇ ಹೋಗಿತ್ತು. ಈ ರೀತಿಯ ಹಲವಾರು ವಿಚಾರಗಳು 'ಗಂಭೀರ ಚಿಂತನೆ'ಗಳನ್ನು ಮೂಡಿಸುತ್ತಿದೆ.

ಈ ರೀತಿಯ ಆಧುನಿಕ ಮೇಲ್ವರ್ಗದ ಮಹಿಳೆಯ ಆದರ್ಶ ಚಿತ್ರಣದಿಂದಾಗಿ ಬಹುಮುಖಿ ಭಾರತೀಯ ಸಮಾಜದಲ್ಲಿದ್ದ ಬಹುಸಂಖ್ಯಾತ ಕೆಳವರ್ಗಗಳ ಮಹಿಳಾ ಸಮೂಹದ ಅನನ್ಯತೆ, ಸಾಂಸ್ಕೃತಿಕ ಅಭಿವ್ಯಕ್ತಿ

ಮಾಧ್ಯಮಗಳು ಮೂಲೆ ಗುಂಪಾದವು. ಹಿಂದೂ ಪಂಡಿತರ ಸಹಾಯದಿಂದ ಬ್ರಿಟೀಷರು ರೂಪಿಸಿದ ಕಾನೂನು ಸಂಹಿತೆಗಳಿಂದಾಗಿ ಮೇಲ್ವರ್ಗದ ಹಿಂದೂ ನೀತಿ ಸಂಹಿತೆಯೇ ಸಾರ್ವತ್ರಿಕವಾಗಿದ್ದರಿಂದ ಕೆಳವರ್ಗಗಳ ಕಾಯಿದೆ, ನೀತಿ ಸಂಹಿತೆಗಳು ಪ್ರಾಮುಖ್ಯತೆ ಕಳೆದುಕೊಂಡವು. ಮೇಲ್ವರ್ಗದ ಮಹಿಳೆಗಿಂತ ಹೆಚ್ಚು ಸ್ವತಂತ್ರಳಾಗಿದ್ದ ಬಹುಸಂಖ್ಯಾತ ಮಹಿಳೆಯರು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟರು. ಸಾರ್ವಜನಿಕ ಜೀವನಕ್ಕೆ ಹೆಚ್ಚು ತೆರೆದು ಕೊಂಡಂತಹ ಈ ವರ್ಗದ ಮಹಿಳೆಯರನ್ನು ಗಯ್ಯಾಳಿಗಳು, ಅನಾಗರಿಕ ಗಡಸು ಸ್ವಭಾವದ ಅಶ್ಲೀಲ ಮಹಿಳೆಯರೆಂಬಂತೆ ದೂರೀಕರಿಸಲಾಯಿತು. ಬಂಗಾಳದಲ್ಲಿ ಈ ಪ್ರವೃತ್ತಿ ಬಹುಮಟ್ಟಿಗೆ ಕಾಣಬಂದಿತು.

**ಉಪಸಂಹಾರ**

ಒಟ್ಟಿನಲ್ಲಿ ಭಾರತದ ಇತಿಹಾಸದುದ್ದಕ್ಕೂ ಸಾಂಪ್ರದಾಯಿಕವಾಗಿ ರೂಪುಗೊಂಡಿದ್ದ ಪಿತೃಪ್ರಧಾನ ಸಂಸ್ಕೃತಿ ಆಧುನಿಕ "ಪುನರುಜ್ಜೀವನ'ದ ಕಾಲದಲ್ಲಿ ಮತ್ತಷ್ಟು ಆಳವಾಗಿ ಬೇರೂರಿತು. ಈ ಕಾಲದಲ್ಲಿ ರೂಪುಗೊಂಡ ಆದರ್ಶಮಹಿಳೆಯ ಚಿತ್ರಣ 20ನೇ ಶತಮಾನದುದ್ದಕ್ಕೂ ಭಾರತೀಯ ಪ್ರಜ್ಞೆಯಲ್ಲಿ ಆಳವಾಗಿ ನೆಲೆ ನಿಂತಿತು. ಇದರಿಂದಾಗಿ ಸಾಮಾಜಿಕ ಶಾಸನಗಳನ್ನು ಮಾಡುವ ಸಂದರ್ಭಗಳಲ್ಲಿ ಸಾಮಾಜಿಕ ಸಾರ್ವತ್ರಿಕ ಬದುಕಿನಲ್ಲಿ ಮಹಿಳೆಯ ಬೆಳವಣಿಗೆಗೆ ತೊಡಕಾಗಿ ಪರಿಣಮಿಸಿತು.

**ಕೊನೆಟಿಪ್ಪಣಿಗಳು**

1. Uma Chakravarthy. What ever Happened to Vedic Dasi' in *Recasting Women*, ed-Kumkum Sangari & Sudesh Vaid.
2. Spear (1973). Life *in Ancient India*, Delhi, Cosmo Publication, New-Delhi. pp.166-167
3. Sumith Sarkar. (1985). The Women's Question in Nineteenth Century Bengal' in *Women and Culture*, ed. Kumkum Sangari and Sudesh Vaid SNOT Women's University, Bombay. p. 157-172
4. Phartha Chatarji. The Nationalist Resolution of the Women's Question', in *Recasting Women*, ed. Kumkum Sangari and Sudesh Vaid, SNOT Women's University, Bombay p.247

**ಪರಾಮರ್ಶನ ಗ್ರಂಥಗಳು**


- Claris bladder. (1925). Women in Ancient India. Longmans Greens, London.
- James mill. The History of British India
- Phartha Chatarji. (1999). The Omnibus. Oxford University Press, New-Delhi.
- Malavika Kalenkar. (1993). Voices from Within-Early Personal Narratives of Bengali Women, Oxford University Press, New-Delhi.
- Sumith Sarkar. (1997). Writing Social History. Oxford University Press, New-Delhi.